(ಶ್ರೀ ವಿ. ವಿ. ವಾಯಿ)

ಡಿ. ಯವರು ಯಾವ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ. ಆ ರಸ್ತೆಯನ್ನು ಮತ್ತು ಸೇತುವೆಯನ್ನು ತೀವ್ರವಾಗಿ ಸರಿಪಡಿಸಿಕೊಡಬೇಕು. ಈ ಬಗ್ಗೆ ಡಿಪಿ ಕಟ್ಟಿ ಕೊಡಬೇಕು. ಅದಿ ಎತ್ತಿನ ಬಂಡಿಗಳನ್ನ ಕಟ್ಟಿಕೊಂಡು ಹೋಗುವುದಕ್ಕೂ ಸಾಧ್ಯವಿಲ್ಲ. ಇವುಗಳು ಯಾವ ಹಂತದಲ್ಲಿ ಬಿಳಿಸುತ್ತೀರಾ ?.

‡ಶ್ರೀ ಹೆಚ್. ಎಂ. ಚೆನ್ನಬಸಪ್ಪ :—ಸಾಧ್ಯವಾದಷ್ಟು ಬಟ್ಟೆಗಳನ್ನಷ್ಟಾದರೂ ಕಟ್ಟಿಸಿಕೊಡುತ್ತೇವೆ. ಈ ವರ್ಷ ಮಾಡಿಸಿಕೊಡುವುದಕ್ಕೆ ಪ್ರಯತ್ನಿಸುತ್ತೇವೆ.

‡ *Distribution of Clothes at Cheaper Rate*

SRI M. H. JAYAPRAKASH NARAYAN (Sirsi) : Will the Minister for Food and Civil Supplies be pleased to state :

(*a*) the number of sarees, dhoties and other clothes distributed at cheaper rates in each month of the last year in the State ;

(*b*) the mode of distribution and the details from 1-1-1974 may be furnished ?

SMT. E. E. VAZ (Minister for Food and Civil Supplies) :

(*a*) The list in respect of Sarees, Dhoties and other varieties of cheaper cloths distributed every month is placed on the Table of the House.**

(*b*) The same has been distributed throughout the State through 31 wholesale stores and 1,101 Retail Co-operative Societies (details are furnished in the Statement) placed on the Table of the House. **

** Copies placed in the Karnataka Legislature Library (vide) No. 22 dated 27-2-75,

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಅಗ್ಗದ ಬೆಲೆಯ ಬಟ್ಟೆಯನ್ನು ಬಡವರಿಗೆ ಹಂಚಿತ್ತಿದ್ದೇವೆಂದು ಹೇಳಿದ್ದೀರಿ. ಅದರಲ್ಲಿ ತಾವು ಏನು ಬಡವರಿಗಾಗಿ ಹಂಚಲು ವ್ಯವಸ್ಥೆ ಮಾಡಿದ್ದೀರಿ ಅದು ಪೂರ್ಣವಾಗಿ ಬಡವರಿಗೆ ಸಲ್ಲದೆ ಎಂದು ಸರ್ಕಾರದಲ್ಲಿ ಏನು ಮಾಹಿತಿ ಇದೆ?

‡ ಶ್ರೀಮತಿ ಇ. ಇ. ವಾಜ್. ಆ ಬಟ್ಟೆಗಳನ್ನು ಬೆಂಗಳೂರಿನಲ್ಲಿ ರೇಷನ್ ಕಾರ್ಡ್ ತೋರಿಸಿ ತೆಗೆದುಕೊಳ್ಳುತ್ತಾರೆ. ಗ್ರಾಮಾಂತರಗಳಲ್ಲಿ ಅಲ್ಲಿಯ ಸ್ಥಳೀಯ ಜನರನ್ನು ನೋಡಿ ಕೊಡುತ್ತಿದ್ದಾರೆ ಈಗ ಏನು ನಾವು ಬಡವರಿಗೆ ಕೊಡುತ್ತಿದ್ದೇವೆ ಅದು ಸ್ವಲ್ಪ ಕೋರ್ಸ್ ಟೈಪ್ ಇರುತ್ತದೆ ಆದ್ದರಿಂದ ಅದು ಬಡವಂಗೆ ಸೇರುತ್ತದೆ ಎಂಬ ಭರವಸೆ ನಮಗೆ ಇದೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.— ಅಗ್ಗದ ಬೆಲೆಯಲ್ಲಿ ಸರ್ಕಾರದವರು ಸೀರೆ ಪಂಚೆಗಳನ್ನು ಸಹಕಾರ ಸಂಘಗಳ ಮೂಲಕ ಕೊಟ್ಟಿದ್ದೇವೆ ಎಂದು 1100 ಟ್ಲ್ಲರೆ ಸಹಕಾರ ಸಂಘಗಳಿಗೆ ಮತ್ತು 39 ಸಗಟು ವ್ಯಾಪಾರ ಸಹಕಾರ ಸಂಘಗಳ ಮೂಲಕ ಕೊಟ್ಟಿದ್ದೇವೆ ಎಂದು ಹೇಳುತ್ತೀರಿ ಸರ್ಕಾರದ ನೀತಿ ಏನು ಇದೆ ಎಂದರೆ ನಿರ್ಗತಿಕರಿಗೆ ಅಂದರೆ ಅನ್ನ, ಬಟ್ಟೆ, ವಸತಿ ಇಲ್ಲದವರಿಗೆ ಕೊಡಬೇಕೆನ್ನುವುದು ಆದರೆ ಅವರಿಗೆ ಅದು ತಲುಪುತ್ತಿಲ್ಲ; ಬಂಡವಾಳಶಾಹಿಗಳಿಗೆ ಹೋಗಿ ಅದು ಬ್ಲಾಕ್‌ಮಾರ್ಕೆಟ್ ಮಾಡುತ್ತಿದ್ದಾರೆ. ಇದನ್ನು ತಪ್ಪಿಸಿ ಸರಿಯಾದ ವ್ಯವಸ್ಥೆ ಮಾಡಿ ಅವರಿಗೆ ತಲುಪುವಂತೆ ಮಾಡುತ್ತೀರಾ?

ಶ್ರೀಮತಿ ಇ. ಇ. ವಾಜ್. ನಮಗೆ ಸುಮಾರು 1189 ಬೇಲ್ಸ್ ಬಟ್ಟೆ ಬರುತ್ತಿದ್ದು ಈಗ ಅದು 2100 ಬೇಲ್ಸ್ ಬರುತ್ತಾ ಇದೆ. ಎಲ್ಲಾ ತಾಲ್ಲೂಕು ಮತ್ತು ಜಿಲ್ಲೆಗಳಿಗೂ ಹಂಚಿಕೆ ಮಾಡಿದ್ದೇವೆ. ಅದರ ಮೇಲೆ ಸರ್ಕಾರದ ಸೀಲು ಇರುತ್ತದೆ ಅದನ್ನು ಬ್ಲಾಕ್ ಮಾರ್ಕೆಟ್ ಮಾಡಿದ್ದು ಕಂಡುಬಂದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಆದ್ದರಿಂದ ಹೆಚ್ಚು ಬಡವರಿಗೆ ಹೋಗುತ್ತಾ ಇದೆಯೆಂಬ ಭಾವನೆ ನಮಗೆ ಇದೆ.

ಶ್ರೀ ಕೋಣಂದೂರು ಲಿಂಗಪ್ಪ. ಸೀರೆ ಮತ್ತು ಪಂಚೆಗಳು ಸೊಸೈಟಿಗೆ ಹೋಗದೆ ಮಾಯವಾಗಿ ಬೇರೆ ಬೇರೆ ಕಡೆಗೆ ಹೋಗುತ್ತವೆ ಅಂಥ ಪ್ರಕರಣಗಳನ್ನು ತಮ್ಮ ಕಣ್ಣಿಗೆ ತೋರಿಸಿದರೆ ತಾವು ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀಮತಿ ಇ. ಇ. ವಾಜ್. ಆಗಲೇ ನಾನು ಹೇಳಿದ್ದೇನೆ ಅಂಥಾದ್ದು ಕಂಡು ಬಂದರೆ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಈಗ ಏನು ಬಡವರಿಗೆ ಬಟ್ಟೆಗಳನ್ನು ಕೊಡುತ್ತಿದ್ದೇವೆಂದು ಮಂತ್ರಿಗಳು ಹೇಳಿದರು. ನಾನು ಅವರನ್ನು ಕೇಳುತ್ತೇನೆ ಆ ಬಟ್ಟೆಗಳನ್ನು ತಾವು ನೋಡಿದ್ದೀರಾ ? ಬಡವರ ಹೆಸರು ಹೇಳಿ ಹಂಚುತ್ತಿದ್ದೇವೆಂದು ಹೇಳುತ್ತಾ ಇದ್ದಾರೆ ಅದನ್ನು ನೋಡಬೇಕು ? ಕಣ್ಣಿಂದ ನೋಡಲು ಸಾಧ್ಯವಿಲ್ಲ.

ಅಧ್ಯಕ್ಷರು.—ಒಂದು ಕಡೆ ಬ್ಲಾಕ್ ಮಾರ್ಕೆಟ್ ತಗುತ್ತಿದೆ ಎಂದು ಹೇಳುತ್ತಾರೆ. ಒಂದು ಕಡೆ ಆ ಬಟ್ಟೆಯನ್ನು ನೋಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತಾರೆ ?

ಶ್ರೀ ಎಂ. ಎಸ್. ಕೃಷ್ಣನ್ :—ಸ್ವಾಮಿ, ಈ ಕೈಗಾರಿಕಾ ಕ್ಷೇತ್ರದಲ್ಲಿರುವಂಥ, ಫ್ಯಾಕ್ಟರಿಯಲ್ಲಿ ಕೆಲಸ ಮಾಡುವವರು ಏನು ಒಂದು ಸೊಸೈಟಿ ಮಾಡಿಕೊಂಡಿರುತ್ತಾರೋ ಆ ಸೊಸೈಟಿಯಲ್ಲಿ ಈ ಸೀರೆ ಪಂಚೆಗಳನ್ನು ಕೊಂಡುಕೊಳ್ಳುವುದಕ್ಕೆ ಹೋದಾಗ ಅವರಿಗೆ ಸಿಗುತ್ತಾ ಇಲ್ಲ, ಕೊಡುತ್ತಾ ಇಲ್ಲ ಎನ್ನುವ ದೂರುಗಳು ಇವೆ. ಮತ್ತು ಕೊಡುತ್ತಾ ಇರತಕ್ಕಂಥ ಬಟ್ಟೆಗಳೂ ಕೂಡ ಕ್ವಾಲಿಟಿಯಲ್ಲಿ ಹೋಸವಾಗುವ ರೀತಿಯಲ್ಲಿ ಇದೆ ಎನ್ನುವ ದೂರುಗಳು ಬಂದಿವೆ. ಅದನ್ನು ಸರಿಪಡಿಸುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀಮತಿ ಇ. ಇ ವಾಜ್ :—ಗ್ರೇ ಲಾಂಗ್ ಕ್ಲಾತ್ ಬಹಳ ಕೀಳುಮಟ್ಟದಲ್ಲಿದೆ ಎನ್ನುವ ದೂರು ಬಂದಾಗ ಅದನ್ನು ಅಕ್ಟೋಬರ್ ತಿಂಗಳಿಂದ ಪ್ರೊಡ್ಯೂಸ್ ಮಾಡಬಾರದು ಎಂದು ಟೆಕ್ಸ್‌ಟೈಲ್ ಕಮಿಷನರ್ ಆ ಮಿಲ್‌ನವರಿಗೆ ಆರ್ಡರ್ ಕೊಟ್ಟಿದ್ದಾರೆ. ಮತ್ತು ಹೆಚ್ಚು ಸೀರೆ ಮತ್ತು ಪಂಚೆಗಳನ್ನು ತಯಾರು ಮಾಡಬೇಕು ಎಂದು ಹೇಳಿದ್ದಾರೆ. ಮತ್ತು ಟೆಕ್ಸ್‌ಟೈಲ್ ಕಮಿಷನರ್ ಆವಾಗ ಆವಾಗ ಆ ಮಿಲ್ಲುಗಳನ್ನು ಚಕ್ ಮಾಡುತ್ತಾರೆ. ಸರಿಯಾದ ರೀತಿಯಲ್ಲಿ ಕ್ವಾಲಿಟಿ ತಯಾರು ಮಾಡದೇ ಹೋದರೆ ಅಂಥಾ ಮಿಲ್ ಮೇಲೆ ಕ್ರಮ ತೆಗೆದುಕೊಳ್ಳುವ ಬೆದರಿಕೆ ಕೊಟ್ಟಿದ್ದಾರೆ.

ಶ್ರೀ ಎಂ. ಬಿ ರಾಮಸ್ವಾಮಿ :—ಈಗತಾನೇ ತಿಳಿಸಿದಿರಿ ರಾಜ್ಯದ ಎಲ್ಲಾ ತಾಲ್ಲೂಕುಗಳಿಗೂ ಸೀರೆ ಮತ್ತು ಪಂಚೆಯನ್ನು ಸರಬರಾಜು ಮಾಡುತ್ತಿದ್ದೇವೆ ಎಂದು. ಆದರೆ ನಮ್ಮ ಬೆಂಗಳೂರು ಜಿಲ್ಲೆ 11 ತಾಲ್ಲೂಕು ಸೇರಿದ ಜಿಲ್ಲೆ. ಪ್ರತಿಯೊಂದು ತಾಲ್ಲೂಕಿಗೂ ಎಷ್ಟೆಷ್ಟು ಸರಬರಾಜು ಮಾಡುತ್ತಿದ್ದೀರಿ ಎನ್ನುವ ವಿವರಣೆಯನ್ನು ಕೊಡುತ್ತೀರಾ

ಶ್ರೀಮತಿ ಇ. ಇ. ವಾಜ್ :—ಎಲ್ಲೆಲ್ಲಿ ಸರಬರಾಜು ಮಾಡಿದೆ ಅನ್ನುವ ವ್ಯೂಹಿತಿಯನ್ನು ಪಟ್ಟಿಯಲ್ಲಿ ಕೊಟ್ಟಿದ್ದೇನೆ. ಅದನ್ನು ನೋಡಿ.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್ :—ನಾನು ಈ ಪ್ರಶ್ನೆಯನ್ನು ಕೇಳುವುದರ ಮೂಲ ಉದ್ದೇಶ ಏನು ಎಂದರೆ ನೀವು ಕೊಡತಕ್ಕಂಥ ಬಟ್ಟೆ ಸೀರೆ ಮತ್ತು ಪಂಚೆ ಬಡವರಿಗೆ ತಲುಪಬೇಕು ಎಂದು. ಆದುದರಿಂದ ಈ ಬಗ್ಗೆ ನಾನು ಕೇಳುವುದು ಏನೆಂದರೆ ಬೆಂಗಳೂರಿನಲ್ಲಿ ರೇಷನ್ ಕಾರ್ಡಿನಲ್ಲಿ ಯಾವ ರೀತಿ ವಿತರಣೆ ಮಾಡುತ್ತೀರೋ ಅದೇ ರೀತಿಯಾಗಿ ತಾಲ್ಲೂಕುಗಳಲ್ಲಿರುವ ತಹಸೀಲ್ದಾರರಿಂದ ರೇಷನ್ ಕಾರ್ಡ್ ಕೊಡಿಸಿ ನಿರ್ಗತಿಕರಾದವರಿಗೆ ಆ ಬಟ್ಟೆ ದೊರಕುವಂತೆ ಏರ್ಪಾಡು ಮಾಡುತ್ತೀರಾ ?

ಶ್ರೀಮತಿ ಇ ಇ. ವಾಜ್ :—ಅದನ್ನು ಪರಿಶೀಲನೆ ಮಾಡಲಾಗುತ್ತದೆ. ಎಲ್ಲಾ ಕಡೆಯೂ ರೇಷನ್ ಕಾರ್ಡ್ ಇಲ್ಲ. ಎಲ್ಲೆಲ್ಲಿ ಸೊಸೈಟಿಗಳು ಇವೆ, ಎಲ್ಲಿ ಸಿಗುತ್ತಾ ಇಲ್ಲ ಅಲ್ಲ ಅವರು ಕೇಳಿಕೊಂಡರೆ ಆ ಜಾಗದಲ್ಲೂ ಕೂಡ ಕೊಡುವುದಕ್ಕೆ ಪ್ರಯತ್ನ ಮಾಡಬಹುದು.

**Industrial Estate at Ankola*

560 SMT. RADHA BHAT (Ankola) :—

Will the Minister for Industries and Parliamentary Affairs be pleased to state :—

(*a*) the steps taken by the Government for sanctioning an Industrial Estate Scheme in Ankola and the time required for its implementation ;

(*b*) the stage at which the establishment of Industrial Estate at Sirsi stands ;

(*c*) whether it has come to the notice of the Government that the small industrialists of North Kanara District are facing hardship for want of timely facilities from the Government ?

SRI S. M. KRISHNA. –(Minister for Industries and Parliamentary Affairs).